ಮಾಲ್ ಪಕ್ಕದಲ್ಲಿ ಒಂದು ಕಂಪ್ಯೂಟರ್ ಇಡಲಾಗಿತ್ತು. ಅದರೊಳಗಿನ ಕಿಂಡಿಯೊಳಗೆ ಐದು ರೂಪಾಯಿಯ ನಾಣ್ಯವನ್ನು ಹಾಕಿದಾಗ, ಅದರಿಂದ ನಾಣ್ಯ ಹಾಕಿದವನ ಭವಿಷ್ಯಕ್ಕೆ ಸಂಬಂಧಿಸಿದ ಸಂದೇಶವೊಂದು ಕಾರ್ಡ್‌ನಲ್ಲಿ ಹೊರ ಬರುತ್ತಿತ್ತು. ಒಮ್ಮೆ ಪ್ರೈಮರಿ ಶಾಲೆಯ ಮಾಸ್ತರರೊಬ್ಬರು ಕಂಪ್ಯೂಟರ್‌ನ ಕಿಂಡಿಯೊಳಗೆ ಐದು ರೂಪಾಯಿಯ ನಾಣ್ಯ ಹಾಕಿದರು. ಎರಡು ಕ್ಷಣದಲ್ಲಿ ಒಂದು ಕಾರ್ಡ್ ಬಂತು. ಅದರಲ್ಲಿ ಹೀಗೆ ಬರೆಯಲಾಗಿತ್ತು: 'ನೀವು ನಿಮ್ಮ ಯೋಗ್ಯತೆಯನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳಿ. ಇನ್ನೊಬ್ಬರನ್ನು ನಂಬಬೇಡಿ.'

ಶಾಲಾ ಮಾಸ್ತರರು ಮತ್ತೆ ಒಂದು ಚಿಕ್ಕ ಬಿಳಿ ಹಾಳೆಯಲ್ಲಿ 'ಕತ್ತೆ' ಎಂದು ಬರೆದು ಕಿಂಡಿಯೊಳಗೆ ಐದು ರೂಪಾಯಿಯ ನಾಣ್ಯದೊಂದಿಗೆ ಹಾಕಿದರು. ಈಗ ಬಂದ ಕಾರ್ಡ್‌ನಲ್ಲಿ ಹೀಗೆ ಬರೆಯಲಾಗಿತ್ತು: 'ನೀವು ಕತ್ತೆಯಂತೆ ದುಡಿದರೆ ಮುಂದೆ ಶಾಲೆಯ ಹೆಡ್‌ಮಾಸ್ತರ್ ಆಗುತ್ತೀರ.'

***

ಒಂದು ಸಿನಿಮಾದಲ್ಲಿ ಪಾತ್ರ ವಹಿಸಿದ್ದ ನಾಯಕ ಮತ್ತು ನಾಯಕಿಯ ಚಿತ್ರ ನೆಲಕಚ್ಚಿತು. ಇಬ್ಬರ ಬೇಡಿಕೆಯೂ ಕುಸಿಯಿತು. ನಂತರ ಇಬ್ಬರೂ ತಮ್ಮ ತಮ್ಮ ಇಮೇಜನ್ನು ಸುಧಾರಿಸಿಕೊಳ್ಳಲು ಒಂದು ಅತ್ಯಂತ ಪ್ರಭಾವಶಾಲಿ ರಂಗ ಪ್ರದರ್ಶನ ನೀಡಲು ನಿರ್ಧರಿಸಿದರು. ಎರಡು ದಿನಗಳ ನಂತರ ನಾಯಕಿ, ನಾಯಕನಿಗೆ ಇಬ್ಬರ ಅಭಿನಯದ ದೃಶ್ಯದ ಬಗ್ಗೆ ವಿವರಣೆ ಕೊಡಲಾರಂಭಿಸಿದಳು; 'ಪರದೆ ಎದ್ದಾಗ ನಾನೊಂದು ಹಾಡು ಹೇಳ್ತೀನಿ. ಪರದೆ ಬಿದ್ದು ಮತ್ತೆ ಎದ್ದಾಗ, ನಾನೊಂದು ನೃತ್ಯ ಮಾಡ್ತೀನಿ. ಮತ್ತೆ ಪರದೆ ಬಿದ್ದು ಮತ್ತೆ ಎದ್ದಾಗ ನಾನು ವೀಣೆ ನುಡಿಸ್ತೀನಿ. ಮತ್ತೆ ಪರದೆ ಬಿದ್ದು ಎದ್ದಾಗ....'

ನಾಯಕ ರೇಗಿ ನಾಯಕಿಯನ್ನು ತಡೆದು ಕೇಳಿದ, 'ಆದರೆ ಆ ದೃಶ್ಯದಲ್ಲಿ ನನ್ನ ಪಾತ್ರವೇನು?'

'ಪರದೆ ಎತ್ತೋದು, ಪರದೆ ಬಿಡೋದು ತನ್ನಷ್ಟಕ್ಕೆ ತಾನೇ ಆಗುತ್ತಾ!' ನಾಯಕಿ ಸೂಚ್ಯವಾಗಿ ಹೇಳಿದಾಗ ನಾಯಕ ಅಲ್ಲಿಯೇ ಕುಸಿದು ಕೂತ.

***

ಮಹಾತ್ಮರೊಬ್ಬರು ಪ್ರವಚನ ಕೊಡುತ್ತಿದ್ದರು. ಶ್ರೋತೃಗಳು ತನ್ಮಯತೆಯಿಂದ ಅವರ ಪ್ರವಚನವನ್ನು ಕೇಳುತ್ತಿದ್ದರು. ಪ್ರವಚನ ಮುಗಿದ ನಂತರ ಮಹಾತ್ಮರು ಶ್ರೋತೃಗಳಿಗೆ ಹೇಳಿದರು –'ಪ್ರಶ್ನೆಗಳನ್ನು ಕೇಳುವವರು ಕೇಳಬಹುದು.'

ಒಬ್ಬ ಶ್ರೋತೃ ಎದ್ದು ನಿಂತು ಕೈಮುಗಿದು ಕೇಳಿದ – 'ಮಹಾತ್ಮರೇ, ವಾಸ್ತವಿಕತೆ ಮತ್ತು ಭ್ರಮೆಯಲ್ಲಿರುವ ಅಂತರವೇನು?'

ಮಹಾತ್ಮರು ಅವನನ್ನೇ ಸೂಕ್ಷ್ಮವಾಗಿ ಗಮನಿಸುತ್ತಾ ಹೇಳಿದರು, 'ನೀವು ಇಷ್ಟು ಹೊತ್ತು ಇಲ್ಲಿ ಕೂತು ನನ್ನ ಪ್ರವಚನವನ್ನು ಕೇಳಿದಿರಿ, ಇದೇ ವಾಸ್ತವಿಕತೆ. ಆದರೆ ನೀವು ಇದನ್ನು ಕಾರ್ಯರೂಪಕ್ಕೆ ತರುತ್ತೀರ ಎಂದು ಯೋಚಿಸುವುದು ಭ್ರಮೆ!'

***

ಇದು ತುಂಬಾ ಹಿಂದಿನ ಪ್ರಸಂಗ. ಆ ದಿನಗಳಲ್ಲಿ ಕುಟುಂಬ ಯೋಜನಾಧಿಕಾರಿಗಳು ಹಳ್ಳಿಯ ನಾಗರಿಕರಿಗೆ ಜನಸಂಖ್ಯೆ ಹೆಚ್ಚಳದ ಸಮಸ್ಯೆಯ ಬಗ್ಗೆ ವಿವರಿಸುತ್ತಾ ಹೇಳುತ್ತಿದ್ದರು, 'ಭಾರತದಲ್ಲಿ ಪ್ರತಿ ಮೂರು ನಿಮಿಷಕ್ಕೆ ಓರ್ವ ಮಹಿಳೆ ಒಂದು ಮಗುವಿಗೆ ಜನ್ಮ ಕೊಡುತ್ತಾಳೆ. ಈ ಭಯಾನಕ ಪರಿಸ್ಥಿತಿಯನ್ನು ನಿಯಂತ್ರಿಸುವುದು ಹೇಗೆ, ನೀವೇ ಹೇಳಿ.'

ಅಲ್ಲಿದ್ದ ಹಳ್ಳಿಯವನೊಬ್ಬ ಎದ್ದು ನಿಂತು ಸಿಟ್ಟಿನಿಂದ ಹೇಳಿದ, 'ಸಾರ್, ಎಲ್ಲಕ್ಕಿಂತ ಮೊದ್ಲು ಆ ಮಹಿಳೆಯನ್ನು ಹುಡುಕಬೇಕು!'

***

ಸಾಫ್ಟ್‌ವೇರ್ ಯುವಕನೊಬ್ಬ ವಿದೇಶಕ್ಕೆ ನೌಕರಿಯನ್ನರಸಿ ಹೋದ. ಮೂರು ವರ್ಷಗಳಾದರೂ ಅವನು ಭಾರತಕ್ಕೆ ಮರಳಿ ಬರದಿದ್ದಾಗ, ಅವನ ಪ್ರೇಯಸಿ ಅವನಿಗೊಂದು ಪತ್ರವನ್ನು ಬರೆದಳು, 'ಡಿಯರ್, ನಿಮ್ಮಿಂದ ಮೊದಮೊದಲು ಫೋನ್ ಕರೆ ಬರ್ತಿತ್ತು. ಈಚೆಗೆ ಅನೇಕ ತಿಂಗಳುಗಳಿಂದ ನಿಮ್ಮ ಫೋನ್ ಕರೆಯೂ ಇಲ್ಲ, ನನ್ನ ಕರೆಯನ್ನೂ ಎತ್ತುತ್ತಿಲ್ಲ. ಹಾಂ, ನೀವು ವಿದೇಶಕ್ಕೆ ಹೋಗುವಾಗ ನನ್ನದೊಂದು ಸುಂದರ ಫೋಟೊ ತೆಗೆದುಕೊಂಡು ಹೋಗಿದ್ದೀರಿ. ಅದನ್ನು ಕೂಡಲೇ ಕಳುಹಿಸಿ ಕೊಡಿ. ನಾನಿಲ್ಲಿರುವ ಇನ್ನೊಬ್ಬ ಸಾಫ್ಟ್‌ವೇರ್ ಯುವಕನನ್ನು ಮದುವೆಯಾಗಬೇಕೆಂದಿದ್ದೇನೆ.'

ಸಾಫ್ಟ್‌ವೇರ್ ಯುವಕ ಕೂಡಲೇ ಅವಳಿಗೆ ಸುಮಾರು ಇಪ್ಪತ್ತು ಹುಡುಗಿಯರ ಭಾವಚಿತ್ರಗಳನ್ನು ಕಳುಹಿಸುತ್ತಾ, ಅದರೊಂದಿಗೆ ಒಂದು ಪತ್ರ ಬರೆದು ಹೀಗೆ ಸೂಚಿಸಿದ, 'ಈ ಫೋಟೊಗಳಲ್ಲಿ ನಿನ್ನ ಫೋಟೊವನ್ನಿಟ್ಟುಕೊಂಡು ಉಳಿದವುಗಳನ್ನು ಕೂಡಲೇ ವಾಪಸ್ ಕಳಿಸು!'

***

ಇಬ್ಬರು ಕುಡುಕರು ಕುದುರೆ ರೇಸ್ ನೋಡಲು ಹೋದರು. ಅಲ್ಲಿ ನೆರೆದಿದ್ದ ಜನರ ಗುಂಪು ನೋಡಿ ಮೊದಲ ಕುಡುಕ ಹೇಳಿದ, 'ನೋಡ್ಲಾ, ಮನುಷ್ಯನಿಗಿಂತ ಪ್ರಾಣಿಗಳಿಗೆ ವಸಿ ಹೆಚ್ಚು ಬುದ್ಧಿ ಇರುತ್ತೆ ಅಂತ ನಾನು ಹೇಳಿಲ್ವ? ನೋಡ್ತಿರು...'

'ಅದು ಹೇಗೆ ಕಣ್ಲಾ?' ಎರಡನೆಯ ಕುಡುಕ ಓಲಾಡಿದ.

'ನೋಡ್ಲಾ, ಈಗ ಹದಿನೈದು ಕುದುರೆಗಳು ರೇಸ್‌ನಲ್ಲಿ ಓಡ್ತಿವೆ. ಈ ರೇಸ್ ನೋಡಲು ಇಲ್ಲಿ ಸಾವಿರಾರು ಮಂದಿ ಸೇರಿದ್ದಾರೆ. ಅದೇ ಇಲ್ಲಿ ಹದಿನೈದು ಜನರೇ ಕುದುರೆಗಳ ಬದಲು ಓಡಿದ್ದರೆ, ಒಂದ್ ಕುದ್ರೆ ಸಹ ಇವ್ರು ಓಡೋದನ್ನು ನೋಡ್ತಿರಲಿಲ್ಲ!' ಮೊದಲ ಕುಡುಕ ಎರಡನೆಯವನ ಭುಜ ಹಿಡಿದುಕೊಂಡ.


***

ವೈದ್ಯರು ರೋಗಿಯ ಪತಿಗೆ ತಮ್ಮ ಅಸಹಾಯಕತೆಯನ್ನು ತಿಳಿಸುತ್ತಾ, ದೇವರನ್ನು ಸ್ಮರಿಸಲು ಹೇಳಿದರು, 'ನೋಡಿ, ನಿಮ್ಮ ಹೆಂಡ್ತಿ ಇನ್ನು ಕೆಲವೇ ಗಂಟೆಗಳ ಅತಿಥಿ. ಇನ್ನು ಅವಳು ಬದುಕುವ ಭರವಸೆಯಿಲ್ಲ. ನೀವು ಧೈರ್ಯದಿಂದಿರಿ.' ಎಂದು ಹೇಳಿದರು.

ಪತಿ ಮಹಾಶಯ ಕೂಡಲೇ ಹೇಳಿದ, 'ಸಾರ್, ನಾನು ಇವಳೊಂದಿಗೆ ಅದೆಷ್ಟೋ ವರ್ಷಗಳನ್ನು ಕಳೆದಿದ್ದೇನೆ. ಇನ್ನು ಕೆಲವೇ ಗಂಟೆಗಳ ಅತಿಥಿ ಎಂದಿರಿ, ಪರ್ವಾಗಿಲ್ಲ ಸಹಿಸಿಕೊಳ್ತೀನಿ!'

—ಹಿಂದಿಯಿಂದ ಸಂಗ್ರಹ:
**ಡಿ.ಎನ್. ಶ್ರೀನಾಥ್**




ಹಿಂದೆ ತಮಗೆ ಬ್ರಹ್ಮ ಕಪಾಲ ಹೇಗೆ ಕೈಗೆ ಅಂಟಿಕೊಂಡಿತ್ತೊ, ಹಾಗೇ ಭೂಲೋಕದ ಜನರ ಕೈಗೆ ಮೊಬೈಲ್ ಅಂಟಿಕೊಂಡಿದೆ ನೋಡಿ ಸ್ವಾಮಿ.